**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು-ಮಡಿಕೇರಿ**
**ಎಸ್.ಸಿ ಸಂಖ್ಯೆ: 60/2024**

ಫ್ರಾಸಾಃ 12
ಚಾಸಾಃ18

ಸಾಕ್ಷಿದಾರರ ಹೆಸರು : ಮಣಿ

ತಂದೆಯ ಹೆಸರು : ರಾಘವ

ವಯಸ್ಸು : 42 ವರ್ಷ

ವೃತ್ತಿ : ಕೂಲಿ ಕೆಲಸ

ವಾಸ : ಮೆಕೇರಿ ಗ್ರಾಮ.

**ಸಾಕ್ಷಿಯನ್ನು ದಿನಾಂಕ 17-07-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನನಗೆ ಫ್ರಾಸಾ-11 ರವರ ಪರಿಚಯ ಇರುತ್ತದೆ. ನನಗೆ ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯ ಪರಿಚಯ ಇರುವುದಿಲ್ಲ. 1 ನೇ ಆರೋಪಿಯನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ಆರೋಪಿತರ ಮೇಲೆ ಏನು ಪ್ರಕರಣ ದಾಖಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

2. ನಿಪಿ-10 ರ ಫೋಟೊದಲ್ಲಿ ನಾನು ಹಾಗೂ ಫ್ರಾಸಾ-11 ಕಾಣುತ್ತೇವೆ. ನಿಪಿ-10 ರ ಫೋಟೊವನ್ನು ಯಾರ ಮನೆಯಲ್ಲಿ ತೆಗೆಯಲಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅಂದಾಜು ಒಂದು ವರ್ಷದ ಹಿಂದೆ ಪೊಲೀಸರು ಯಾವುದೋ ಒಂದು ಊರಿಗೆ ನನ್ನನ್ನು ಕರೆದುಕೊಂಡು ಹೋಗಿ ಅಲ್ಲಿ ಒಂದು ದಾಖಲೆಗೆ ನನ್ನ ಸಹಿಯನ್ನು ಪಡೆದಿದ್ದರು. ಈಗ ನನಗೆ ತೋರಿಸಿದ ನಿಪಿ-7 ಮಹಜರ್ ನಲ್ಲಿ ನನ್ನ ಸಹಿ ಇರುತ್ತದೆ. ನಿಪಿ-7 ಕ್ಕೆ ಪೊಲೀಸರು ನನ್ನ ಸಹಿಯನ್ನು ಯಾಕೆ ಪಡೆದರು ಎಂದು ನನಗೆ ಗೊತ್ತಿಲ್ಲ. ನಿಪಿ-7 ರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿಲ್ಲ. ನಿಪಿ-7 ರಲ್ಲಿ ಬರೆದ ವಿಷಯಗಳನ್ನು ಪೊಲೀಸರು ಓದಿ ಹೇಳಿರುವುದಿಲ್ಲ. ನಿಪಿ-7 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-7(ಡಿ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ಪೊಲೀಸರ ಮುಂದೆ ನೀಡಿದ ಹೇಳಿಕೆ ಮತ್ತು ಮುಖ್ಯ ವಿಚಾರಣೆಯನ್ನು ಪರಿಶೀಲಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಲಾಗಿದೆ).**

<u>**ಪಾಟೀಸವಾಲು- ಸರ್ಕಾರಿ ಅಭಿಯೋಜಕರಿಂದಃ**</u>

3. ಈ ಪ್ರಕರಣವು ಆರೋಪಿಗಳ ವಿರುದ್ಧ ದಾಖಲಾದ ಬಗ್ಗೆ ಮತ್ತು 1 ನೇ ಆರೋಪಿ ಫ್ರಾಸಾ-3 ರವರನ್ನು ಮದುವೆ ಆಗುತ್ತೇನೆ ಎಂದು ಹೇಳಿ ಆಕೆಯನ್ನು ಗರ್ಭವತಿಯನ್ನಾಗಿ ಮಾಡಿ ಆಕೆಗೆ ಜನಿಸಿದ ನವಜಾತ ಶಿಶು ಗಂಡು ಮಗುವನ್ನು ಉಸಿರುಗಟ್ಟಿಸಿ ಕೊಲೆ ಮಾಡಿ, ತನ್ನ ತಾಯಿಯಾದ 2 ನೇ ಆರೋಪಿಯೊಂದಿಗೆ ಸೇರಿ ಸಾಕ್ಷ್ಯ ನಾಶ ಮಾಡುವ ಉದ್ದೇಶದಿಂದ ಚಾಸಾ-12 ರವರಿಗೆ ಸೇರಿದ ಗದ್ದೆಯ ಜಾಗದಲ್ಲಿ ಹೂತಿರುತ್ತಾನೆ ಎಂದು ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ.

4. ದಿನಾಂಕ 24-03-2024 ರಂದು ಫ್ರಾಸಾ-3 ರವರು ಅವರ ಮನೆಗೆ ಬಂದ ಪೊಲೀಸರಿಗೆ ತನ್ನ ಮನೆಯ ಒಳಗೆ ಕರೆದುಕೊಂಡು ಹೋಗಿ ಆಕೆ ಮಲಗುವ ಕೋಣೆಯನ್ನು ತೋರಿಸಿ ಇಲ್ಲಿಯೇ ತಾನು ದಿನಾಂಕ 06-03-2024 ಮಧ್ಯರಾತ್ರಿ ಗಂಡು ಮಗುವಿಗೆ ಜನ್ಮ ನೀಡಿರುವುದಾಗಿಯೂ ಮತ್ತು ಸದರಿ ಮಗುವನ್ನು 1 ನೇ ಆರೋಪಿಗೆ ನೀಡಿರುವುದಾಗಿಯೂ ತೋರಿಸಿದ ಮೇರೆಗೆ ಪೊಲೀಸರು ನಮ್ಮ ಸಮಕ್ಷಮ ನಿಪಿ-7 ರಂತೆ ಮಹಜರ್ ಬರೆದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-10 ರಲ್ಲಿ ಕಾಣುವ ಕೋಣೆ ಫ್ರಾಸಾ-3 ರವರು ತೋರಿಸಿದ ಕೋಣೆ ಆಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲು- **1** ಮತ್ತು **2** ನೇ ಆರೋಪಿ ಪರ ಶ್ರೀ. ಬಿ.ಡಿ.ಕೆ,ವಕೀಲರು **ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.**

<u>ಮರುವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.
ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ